**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂ ಃ 11**

**ಸಿಡಬ್ಲ್ಯೂ ಃ 21**

ಸಾಕ್ಷಿದಾರರ ಹೆಸರು ಃ ಶರಣಗೌಡ

ತಂದೆ ಹೆಸರು ಃ ಸಂಗನಗೌಡ

ವಯಸ್ಸು ಃ 34 ವರ್ಷ

ಉದ್ಯೋಗ ಃ ಪಿ ಎಸ್ ಐ, ರಾಜ್ಯ ಗುಪ್ತ ವಾರ್ತೆ

ವಾಸಸ್ಥಳ ಃ ಯಾದಗಿರಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

ನಾನು 2020 ರಿಂದ 2022 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆ ಯಲ್ಲಿ ಪಿ ಎಸ್ ಐ ಅಂತಾ ಸೇವೆ ಸಲ್ಲಿಸಿದ್ದೇನೆ.

ದಿಃ 28.9.2021 ರಂದು ಸಂಜೆಃ 16.45 ಗಂಟೆಗೆ ನಾನು ಠಾಣೆ ಪ್ರಭಾರದಲ್ಲಿ ದೂರುದಾರ ಚಾಸಾ-1 ಠಾಣೆಗೆ ಹಾಜರಾಗಿ, ನೀಡಿದ ದೂರನ್ನು ಸ್ವೀಕಾರ ಮಾಡಿ ಗುನ್ನಾ ನಂಃ 41/2021 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಘಟನಾ ಸ್ಥಳಕ್ಕೆ ಅದೇ ದಿನ ಬೆಟ್ಟಿ ನೀಡಿ ಸ್ಥಳದಲ್ಲಿದ್ದ ಪಂಚರಾದ ಚಾಸಾ-2 ಹಾಗೂ 3 ರವರ ಸಮಕ್ಷಮ ಸಂಜೆಃ 17.30 ರಿಂದ 18.30 ಗಂಟೆವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ.3 ರಂತೆ ಪಂಚನಾಮೆ ಮಾಡಿದ್ದೇನೆ. ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.1-ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ.21 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.21-ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.3-ಡಿ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಿಪಿ.4 ಹಾಗೂ 5 ರಂತೆ ಪೋಟೋ ತೆಗೆಸಿದ್ದೇನೆ. ಪ್ರಕರಣಕ್ಕೆ ಸಂಬಂಧಪಟ್ಟ ಸಾಕ್ಷಿದಾರರಾದ ಚಾಸಾ-9 ರಿಂದ 12 ರವರನ್ನು ಠಾಣೆಗೆ ಕರೆಸಿಕೊಂಡು ಅವರ ಹೇಳಿಕೆ ಪಡೆದುಕೊಂಡಿದ್ದೇನೆ.

ಪ್ರಕರಣದಲ್ಲಿ ಆರೋಪಿತನಾದ ಮೆಹರಬೂಬಸಾಬ ತಂದೆ ಫಯಾಜಅಹ್ಮದ ನಾಗನೂರ ರವರು ಮದ್ಯಸೇವನೆ ಮಾಡಿದ್ದನೋ ಅಥವಾ ಇಲ್ಲವೆಂದು ತಿಳಿದುಕೊಳ್ಳಲು ಕಿಮ್ಸ ಆಸ್ಪತ್ರೆಯವರಿಗೆ ಪತ್ರ ಬರೆದಿದ್ದೇನೆ. ದಿಃ 29.9.2021 ರಂದು ಪ್ರಕರಣದಲ್ಲಿಯ ದೂರುದಾರ ರವರ ಪುನರ ಹೇಳಿಕೆ ಪಡೆದುಕೊಂಡಿದ್ದೇನೆ. ಪ್ರಕರಣಕ್ಕೆ ಹೆಚ್ಚುವರಿ ಕಲಂ ಗಳನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲನುಕ್ಕೆ ಮನವಿ ಮೂಲಕ ಯಾದಿ ಮಾಡಿಕೊಂಡಿದ್ದೇನೆ. ಸದರಿ ಯಾದಿ ನಿಪಿ.22 ಎಂದು, ಸಾಕ್ಷಿ ಸಹಿ ನಿಪಿ.22-ಎ ಎಂದು ಗುರುತಿಸಲಾಯಿತು. ಮೃತ ವ್ಯಕ್ತಿಯ ಇನ್ವಕೆಸ್ಟ ಪಂಚನಾಮೆಯನ್ನು ಕಿಮ್ಸ ಶವಾಗಾರದಲ್ಲಿ ಬೆಃ 8.30 ರಿಂದ 9.30 ರವರೆಗೆ ಇಬ್ಬರು ಪಂಚರಾದ ಚಾಸಾ-4 ಹಾಗೂ 5 ರವರ ಸಮಕ್ಷಮ ನಿಪಿ.8 ರಂತೆ ಶವ-ಪಂಚನಾಮೆ ಕೈಗೊಂಡಿದ್ದೇನೆ. ಸದರಿ ಶವ ಪಂಚನಾಮೆ ನಿಪಿ.8 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.8-ಬಿ ಎಂದು ಗುರುತಿಸಲಾಯಿತು. ಮೃತ ವ್ಯಕ್ತಿಯ ಶವ ಪರೀಕ್ಷಾ ಕೈಗೊಂಡು ಮೃತನ ಕುಟುಂಬಸ್ಥರಿಗೆ ಮೃತ ದೇಹವನ್ನು ಹಸ್ತಾಂತರ ಮಾಡಿ ಪಾವತಿ ರಶೀದಿ ಪಡೆದಿದ್ದೇವೆ. ಅದೇ ದಿನ ಬೆಃ 11. ರಿಂದ ಮಃ 12 ಗಂಟೆವರೆಗೆ ಪೂರ್ವ ಸಂಚಾರ ಪೋಲಿಸ ಠಾಣೆ ಆವರಣದಲ್ಲಿ ಅಪಘಾತ ದಲ್ಲಿ ಶಾಮೀಲಾದ ಎರಡು ವಾಹನಗಳನ್ನು ವಶಕ್ಕೆ ಪಡೆದುಕೊಂಡು ಮುಂದಿನ ತನಿಖೆಗೋಸ್ಕರ ಇಬ್ಬರು ಪಂಚರ ಸಮಕ್ಷಮ ನಿಪಿ.6 ರಂತೆ ಪಂಚನಾಮೆ ಮಾಡಿದ್ದೇನೆ. ಸದರಿ ಪಂಚನಾಮೆ ಸಾಕ್ಷಿ ಸಹಿ ನಿಪಿ.6-ಸಿ ಎಂದು ಗುರುತಿಸಲಾಯಿತು. ಹಾಗೂ ಆ ಕಾಲಕ್ಕೆ ನಿಪಿ.2 ರಂತೆ ಪೊಟೋ ತೆಗೆಸಿದ್ದೇನೆ. ಸದರಿ ಪಂಚನಾಮೆಯನ್ನು ಚಾಸಾ-2 ಹಾಗೂ 3 ರವರ ಸಮಕ್ಷಮ ಮಾಡಿದ್ದೇನೆ. ಜಪ್ತ ಮಾಡಿದ ಸ್ವತ್ತನ್ನು ಠಾಣಾ ಸ್ವತ್ತಿನಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ಕಳಿಸಿದ್ದೇನೆ. ಸದರಿ ಪ್ರಕರಣದ ಆರೋಪಿಗೆ ಹೆಚ್ಚಿನ ತನಿಖಗೋಸ್ಕರ ಠಾಣೆಯಲ್ಲಿ ಹಾಜರಿರುವಂತೆ ದಂಡ ಪ್ರಕ್ರಿಯೇ ಸಂಹಿತೆ ಕಲಂ -41 ಎ ಅಡಿಯಲ್ಲಿ ನೋಟಿಸ ನೀಡಿದ್ದೇನೆ. ದಿಃ 30.9.2021 ರಂದು ದೂರು ಠಾಣೆಗೆ ಆಗಮಿಸಿ ತನ್ನ ಪುನರ ಹೇಳಿಕೆ ನೀಡಿದರನ್ವಯ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಪ್ರಕರಣದಲ್ಲಿ ಹೆಚ್ಚುವರಿ ಕಲಂ- ಗಳನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ಪತ್ರದ ಮೂಲಕ ನಿವೇದಿಸಿಕೊಂಡಿದ್ದೇನೆ. ಬೆಃ ಅದೇ ದಿನ 11.30 ಗಂಟೆಗೆ ಸದರಿ ಪ್ರಕರಣದ ಆರೋಪಿಯನ್ನು ದಸ್ತಗಿರಿ ನಿಯಮ ಪಾಲಿಸಿ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ. ಅದೇ ದಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಬ್ಬರು ಸಾಕ್ಷಿದಾರರಾದ ಇಮಾಮಸಾಬ ಅನ್ಸಾರಿ ಹಾಗೂ ಚಾಸಾ-15 ರವರ ಹೇಳಿಕೆ ಪಡೆದುಕೊಂಡಿದ್ದೇನೆ. ಅದೇ ದಿನ ಆರೋಪಿ ಮೇಹಬೂಬ ತಂದೆಃ ಫಯಾಜ ಅಹ್ಮದ ರವರ ಸ್ವ ಇಚ್ಛಾ ಹೇಳಿಕೆ ಪಡೆದಿದ್ದೇನೆ.

ಆರೋಪಿತನು ತಂದು ಹಾಜರಪಡಿಸಿದ ವ್ಯಾಸಂಗ ಪ್ರಮಾಣ ಪತ್ರ ವನ್ನು ಕಡತಕ್ಕೆ ಅಳಡಿಸಿಕೊಂಡಿದ್ದೇನೆ. ಸದರಿ ವ್ಯಾಸಂಗ ಪ್ರಮಾಣ ಪತ್ರ ನಿಪಿ.23 ಎಂದು ಸಾಕ್ಷಿ ಸಹಿ ನಿಪಿ.23-ಎ ಎಂದು ಗುರುತಿಸಲಾಯಿತು. ಅದೇ ದಿನ ಪ್ರಾದೇಶಿಕ ಸಾರಿಗೆ ಇಲಾಖೆ, ಧಾರವಾಡ ಜಿಲ್ಲೆ ಪೂರ್ವ ವಿಭಾಗ ಗಬ್ಬೂರ, ಹುಬ್ಬಳ್ಳಿ ರ ವರಿಗೆ ಯಾಂತ್ರಿಕ ಪರೀಕ್ಷೆ ಪ್ರಮಾಣ ಪತ್ರ ಪೂರೈಸುವಂತೆ ಮನವಿ ಮಾಡಿಕೊಂಡೆನು. ನಂತರ ಅಪಘಾತ ದಲ್ಲಿ ಶಾಮೀಲಾದ ವಾಹನಗಳ ಮಾಲಿಕರಿಗೆ ವಾಹನಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ತಂದು ಹಾಜರಪಡಿಸುವಂತೆ ಕಲಂ-33 ರಂತೆ ಐ ಎಂ ವಿ ಕಾಯ್ದೆ ಪ್ರಕಾರ ನೋಟಿಸು ನೀಡಿದ್ದು ಇರುತ್ತದೆ. ಸದರಿ ನೋಟಿಸುಗಳನ್ನು ನಿಪಿ.24 ಹಾಗೂ 25 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.24-ಎ ಹಾಗೂ ನಿಪಿ.25-ಎ ಎಂದು ಗುರುತಿಸಲಾಯಿತು. ಆ ಪ್ರಕಾರ ವಾಹನ ಮಾಲಿಕರು ತಂದು ಹಾಜರಪಡಿಸಿದ ದಾಖಲೆಗಳನ್ನು ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 4.10.2021 ರಂದು ಪ್ರಕರಣವು ಘೋರ ಸ್ವರೂಪವಾಗಿದ್ದರಿಂದ ಮುಂದಿದಿನ ತನಿಖೆಯನ್ನು ಚಾಸಾ-22 ರವರಿಗೆ ವಹಿಸಿಕೊಟ್ಟಿದ್ದೇನೆ. ನ್ಯಾಯಾಲಯದ ಮುಂದಿರುವ ಎರಡನೇ ಆರೋಪಿ ನೋಡಿ ಗುರುತಿಸಿದ್ದು, 1 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲವೆಂದು ಹೇಳಿದ್ದು, ವಾಹನ ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ, ವಕೀಲರಿಂದಃ**

ನಿಪಿ.1 ದೂರಿನ ಆಧಾರದ ಮೇಲೆ ಪ್ರಕರಣ ದಾಖಲ್ ಮಾಡಿದ್ದೇನೆ ಅಂದರೆ ಸರಿ. ಸ್ಥಳದಲ್ಲಿ ಪಂಚರಿಗೆ ನೋಟಿಸು ಕೊಟ್ಟಿಲ್ಲ. ರೇಲ್ವೆ ಅಂಕರಬ್ರಿಜ್ ಬಳಿ ಪಂಚನಾಮೆ ಮಾಡಿದ್ದೇನೆ. ರೇಲ್ವೆ ಅಂಕರಬ್ರಿಜ್ ನ ಗದಗ ಕಡೆಗೆ ಹೋಗುವ ರೋಡಿನ ಬಳಿ ಮಾಡಿದ್ದೇನೆ. ಮೃತನ ಬೈಕ್ ಗದಗ ರೋಡ್ ಕಡೆಗೆ ಹೊರಟಿತ್ತು. ನಾನು ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ಪಂಚನಾಮೆ ಮಾಡಿದ್ದೇನೆ ಅಂದರೆ ಸರಿಯಲ್ಲ. ಗದಗ – ಪಿಂಟೋ ರೋಡ ಸರ್ಕಲ್ ಬಳಿ ಸುಮಾರು ವಾಹನಗಳು ಓಡಾಡುತ್ತವೆ ಅಂದರೆ ಸರಿ. ಅಲ್ಲಿ ಒಂದರಿಂದ ಮತ್ತೊಂದು ಹೋಗುವುದರಿಂದ ವಾಹನಗಳು ನಿಧಾನವಾಗಿ ಹೋಗುತ್ತವೆ ಅಂದರೆ ಸರಿ. ಗಾಯಾಳು ಮದ್ಯ ಸೇವನೆ ಮಾಡಿದ ಬಗ್ಗೆ ಕಿಮ್ಸ ವೈದ್ಯರ ಬಳಿ ಪರೀಕ್ಷೆ ಮಾಡಲು ವಿನಂತಿ ಅರ್ಜಿ ಕೊಟ್ಟಿಲ್ಲ. ಮೇಹಬೂಬ ವ್ಯಾಸಂಗ ಪ್ರಮಾಣ ಪತ್ರ ಕೊಟ್ಟಿದ್ದರಿಂದ ಆರೋಪಿಯನ್ನಾಗಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಾನು ವಾಹನಗಳನ್ನು ಠಾಣೆಯಲ್ಲಿ ಜಪ್ತಪಡಿಸಿಕೊಂಡಿದ್ದೇನೆ. ಸಾಕ್ಷಿದಾರರ ಹೇಳಿಕೆಗಳನ್ನು ನಾವು ಹೇಳಿದ್ದಕ್ಕೆ ಸಹಿ ಮಾಡಿದ್ದಾರೆ ಅಂದರೆ ಸರಿಯಲ್ಲ. ಹೆಚ್ಚಿನ ತನಿಖೆಗಾಗಿ ಚಾಸಾ-22 ರವರಿಗೆ ವಹಿಸಿದ್ದೇನೆ. ನಾನು ಕೇವಲ ಪಂಚನಾಮೆ, ಹೇಳಿಕೆ, ಪೊಟೋ ತೆಗೆದಿದ್ದೇನೆ, ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಅಂದರೆ ಸರಿಯಲ್ಲ.

ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಿ ಸಿ ಟಿವಿ ಫೂಟೇಜ ಇದ್ದ ಬಗ್ಗೆ ಪಂಚನಾಮೆ ಬರೆದಿಲ್ಲ. ಆರೋಪಿಗಳು ಏನೂ ತಪ್ಪು ಮಾಡದಿದ್ದರೂ ಸುಳ್ಳು ಕೇಸ ಮಾಡಿದ್ದೇವೆ ಅಂದರೆ ಸರಿಯಲ್ಲ. ಚಾಸಾ-9 ರಿಂದ 12 ರವರ ಹೇಳಿಕೆ ಪಡೆಯುವಾಗ ಮೃತ ವ್ಯಕ್ತಿ ಮಧ್ಯಪಾನ ಸೇವನೆ ಮಾಡಿದ ಬಗ್ಗೆ ವಿಚಾರಣೆ ಮಾಡಿದ್ದೇನೆ. ಮಧ್ಯಪಾನ ಸೇವನೆ ಮಾಡಿದ ಬಗ್ಗೆ ಸಾಕ್ಷಿದಾರರು ಹೇಳಿಲ್ಲ. ಆರೋಪಿಗಳ ವಾಹನ ಭಾಗಿಯಾಗಿಲ್ಲ ಅಂದರೆ ಸರಿಯಲ್ಲ. ಘಟನೆಗೂ ಹಾಗೂ ಆರೋಪಿಗಳಿಗೆ ಸಂಬಂಧವಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.